# ಅಧ್ಯಾತ್ಮ

ಮತ್ತೆ ಇತ್ತೀಚಿನ ದಿನಗಳಲ್ಲಿ ಬಹು ಚಾಲ್ತಿಯ ವಿಷಯವಾಗಿರುವ ಅಧ್ಯಾತ್ಮವಾದವು ಒಂದು ಸೈದ್ಧಾಂತಿಕ ಸ್ವರೂಪದಲ್ಲಿ ಚರ್ಚಿತವಾಗುತ್ತಿಲ್ಲ. ಅಲ್ಲದೆ, ಅದು ಸಾಧಾರಣ ಮಟ್ಟದ ಭಕ್ತಿ– ಆರಾಧನೆಯ ಆಚರಣೆಯ ಸ್ವರೂಪದಲ್ಲಿ ಅಭಿವ್ಯಕ್ತವಾಗುತ್ತಿದೆ. ದೇಶದ ಜನಜೀವನದಲ್ಲಿ ಅರ್ಥಸಮೃದ್ಧಿಯು ಅಧಿಕಗೊಂಡಂತೆಲ್ಲಾ, ಸುಖದ ಅನ್ವೇಷಣೆಯ ಅಂತಿಮ ಸಾಧನವಾಗಿ 'ಅಧ್ಯಾತ್ಮ' ಕೆಲಸ ಮಾಡುತ್ತದೆಯೆಂದು ಎಲ್ಲ ಬಗೆಯ ಮಾಧ್ಯಮಗಳು ಸಾರ ಹೊರಟಿವೆ. ಅಧ್ಯಾತ್ಮದ ಮಹಿಮೆಯನ್ನು ಮಾಧ್ಯಮಗಳ ಜೊತೆಗೆ; ಗಲ್ಲಿ ಗಲ್ಲಿಗಳಲ್ಲಿ ಸದಾ ನಡೆಯುತ್ತಿರುವ ಧಾರ್ಮಿಕ ಗೋಷ್ಠಿಗಳು, ಪ್ರವಚನಗಳು, ದೈವಾರಾಧನೆಗಳು– ನಿರಂತರ ಕರ್ಮವೆಂಬಂತೆ ಹೇಳ ಹೊರಟಿವೆ. ಅಧ್ಯಾತ್ಮ ತಿಳಿವಳಿಕೆಯಿಂದ ಸಮಾಜದಲ್ಲಿ ಧಾರ್ಮಿಕ ವಾತಾವರಣ ಮೂಡಿ, ನಮ್ಮ ಪುರಾತನ– ಸನಾತನ ಸಂಸ್ಕೃತಿಯು ಮತ್ತಷ್ಟು ಗಟ್ಟಿಯಾಗಿ, ಜನ ಜೀವನದಲ್ಲಿ ನೈತಿಕತೆ ಮೂಡುತ್ತದೆಯೆಂದು ಭಾವಿಸಲಾಗಿದೆ.

ಈ ಅಧ್ಯಾತ್ಮವಾದವನ್ನು ನಮ್ಮ ಸಾಂಪ್ರದಾಯಿಕ ದೇವಾಲಯಗಳೂ ಮಠಮಾನ್ಯಗಳು ಸಂರಕ್ಷಿಸುತ್ತಿವೆ. ಸಾಲದೆಂಬಂತೆ, ಆಧುನಿಕ ಅಧ್ಯಾತ್ಮ ಗುರುಗಳು ಸೃಷ್ಟಿಗೊಂಡು, ಅವರಿಂದ ಆಧುನಿಕ ತಂತ್ರಜ್ಞಾನದ ಮೂಲಕ ಆಧ್ಯಾತ್ಮಿಕ ಜ್ಞಾನ ನಿತ್ಯ ಪ್ರಸರಣಗೊಳ್ಳುತ್ತಿದೆ. ಸಾಂಪ್ರದಾಯಿಕ ಮಠಮಾನ್ಯಗಳಿಗಿಂತ ಇಂಥ ಗುರುಗಳು ವಿಶೇಷ ಶ್ರೀಮಂತ ಶೋಭೆಯಿಂದ ಕಂಗೊಳಿಸುತ್ತಾರೆ. ದೇಶ ವಿದೇಶಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಜಗತ್ತಿನ ಪ್ರಕ್ಷುಬ್ಧ ಮನಸ್ಸುಗಳನ್ನು ಶಾಂತತೆಯತ್ತ ನೇರ್ಪುಗೊಳಿಸಲು ಇವರು ಅಗಾಧವಾಗಿ ಶ್ರಮಿಸುತ್ತಿದ್ದಾರೆ! ಮನುಷ್ಯ ಮನುಷ್ಯರ ನಡುವಿನ ಅಂತರ– ಅಸಮಾನತೆ; ಅವರನ್ನು ಕಿತ್ತು ತಿನ್ನುತ್ತಿರುವ ಬಡತನ; ಮೌಢ್ಯಾದಿ ಅವೈಜ್ಞಾನಿಕ ನಡವಳಿಕೆಗಳು ಮತ್ತು ಯುದ್ಧ ಭಯೋತ್ಪಾದನೆಯಂಥ ಕ್ರೌರ್ಯಗಳು ಇಂಥ ಅಧ್ಯಾತ್ಮ ಗುರುಗಳಿಂದ ಮಾಯವಾಗುತ್ತದೆಯೆಂದು ಅವರ ಶಿಷ್ಯರು ಪ್ರಚಾರ ಮಾಡುತ್ತಿದ್ದಾರೆ.

ಭಾರತೀಯ ಧಾರ್ಮಿಕ ಸಾಹಿತ್ಯದಲ್ಲಿ 'ಅಧ್ಯಾತ್ಮ'ವನ್ನು ಆತ್ಮಕ್ಕೆ ಸಂಬಂಧಿಸಿದ ಜ್ಞಾನವೆಂದು ಬಗೆದಿದ್ದಾರೆ. ಅದು ಭೌತಿಕವಾದುದಲ್ಲ. ಜೀವಾತ್ಮ ಪರಮಾತ್ಮಗಳ ಸಂಬಂಧಗಳನ್ನು ಅರಿಯುವ ಒಂದು ಪರಿಕ್ರಮ, ತಿಳಿವಳಿಕೆ. ಅದು ಮುಖ್ಯವಾಗಿ ಬ್ರಹ್ಮಜ್ಞಾನವನ್ನು ಕುರಿತು ಮಾತನಾಡುತ್ತದೆ. ಆದ್ದರಿಂದ ಅಧ್ಯಾತ್ಮದ ತಿಳಿವಳಿಕೆಯನ್ನು ಬ್ರಹ್ಮವಿದ್ಯೆಯೆಂದು ಸಹ ಕರೆಯಲಾಗಿದೆ. ಇಹದ ಜೀವನ ಮುಖ್ಯವಲ್ಲ. ಪರಸತ್ಯವನ್ನು ಅರಿಯುವ ಸಾಧನೆಯ ಮಾರ್ಗವೇ ಅಧ್ಯಾತ್ಮ. ಆತ್ಮೋನ್ನತಿಯೇ ಜೀವನದ ಅಂತಿಮ ಗುರಿ, ಅದೇ ಜೀವದ ಸಾಧನೆ. ಆತ್ಮ ಪರಮಾತ್ಮನನ್ನು ಕೂಡಿದಾಗ ಅಥವಾ ಭಕ್ತ ಭಗವಂತನ ಸಾನ್ನಿಧ್ಯ ಪಡೆದಾಗ ಐಕ್ಯಸ್ಥಿತಿ ಸಾಧ್ಯವಾಗುತ್ತದೆ. ಆಗ ಪಡೆಯುವ ಸುಖವನ್ನು ಬ್ರಹ್ಮಾನಂದವೆಂದೂ ಆನಂದ ರಸವೆಂದೂ ಪರಿಗಣಿಸಲಾಗುತ್ತದೆ. ಅಧ್ಯಾತ್ಮ ತಿಳಿವಳಿಕೆಯನ್ನು ಮನುಷ್ಯ ಪಡೆಯಬಹುದಾದ ಅತ್ಯಂತ ಎತ್ತರದ ಮತ್ತು ಕಟ್ಟಕಡೆಯ ಜ್ಞಾನವೆಂದು ವ್ಯಾಖ್ಯಾನಿಸಲಾಗಿದೆ. ಕುವೆಂಪು ಅವರು ಕೂಡ ಅಧ್ಯಾತ್ಮದ ನಿಲವನ್ನು ಅಂತಿಮ ಸತ್ಯವೆಂದು ಹೇಳುತ್ತಾರೆ. ಆಧ್ಯಾತ್ಮಿಕತೆಯು ತಂದು ಕೊಡುವ ಈ ಬ್ರಹ್ಮಾನಂದದ ಅನುಭೂತಿಯನ್ನು ನಮ್ಮ ಋಷಿಮುನಿಗಳು ಕಂಡಿದ್ದಾರೆಂದೂ ಅದು ಅವರು ಕಂಡಿರಿಸಿದ ಅನುಭವವೆಂದೂ ತಿಳಿಯಲಾಗಿದೆ.

ಪ್ರಶ್ನೆ ಮೂಡುವುದು ಇಲ್ಲಿಯೇ. ಬ್ರಹ್ಮಾನಂದವೆಂದರೇನು? ಈ ಆನಂದಾನುಭಾವ ಹೇಗಿರುತ್ತದೆ? ಅದರ ಮೂರ್ತ ಅನುಭವ ಸ್ವರೂಪವೆಂಥದು? ಅದರ ಅನುಭಾವದ ನಂತರದ ಸ್ಥಿತಿಯೇನು? ಅದರಿಂದ ಜೀವಕ್ಕಾಗುವ ಅಂತಿಮ ಸತ್ಯದ ತಿಳಿವಳಿಕೆ ಎಂಥದು? –ಈ ಬಗೆಯ ಪ್ರಶ್ನೆಗಳಿಗೆ ನಿಖರವಾದ ಉತ್ತರಗಳು ದೊರಕುವುದಿಲ್ಲ. ಕೆಲವು ಪಾಶ್ಚಾತ್ಯ ವಿದ್ವಾಂಸರುಗಳ ಪ್ರಕಾರ ಇಂಥ ಅನುಭವಗಳೆಲ್ಲವೂ ಭ್ರಮಾಜನ್ಯವಾದವು. ಪೂರ್ವ ಕಲ್ಪಿತ ತಿಳಿವಳಿಕೆಯ ಮನೋವಿಕಲ್ಪತೆಯ ಸ್ಥಿತಿಯನ್ನು ಬ್ರಹ್ಮಾನಂದವೆಂದು ಬರೆಯಲಾಗಿದೆಯೆಂದು ಕೂಡ ಹೇಳುವವರಿದ್ದಾರೆ.

ಇಂದು ಅಧ್ಯಾತ್ಮವೆಂಬುದು ಮತಧರ್ಮಾದಿಗಳ ಆಚರಣೆಯ ಮಟ್ಟಕ್ಕೆ ಬಂದು ಮುಟ್ಟಿದೆ. ಧಾರ್ಮಿಕ ಆಚರಣೆಗಳೆಲ್ಲವನ್ನೂ– ಜ್ಯೋತಿಷ್ಯ, ಯಜ್ಞ, ಯಾಗ, ಮಾಟ, ಮಂತ್ರಗಳನ್ನು ಕೂಡ– ಅಧ್ಯಾತ್ಮದಡಿಯಲ್ಲಿ ತಂದು ಮಾತನಾಡುತ್ತಿರುವುದನ್ನು ಕಾಣುತ್ತಿದ್ದೇವೆ.

ಅಧ್ಯಾತ್ಮವನ್ನು ಪಾಶ್ಚಾತ್ಯರು 'ಸ್ಪಿರಿಚುಯಲಾಟಿ' ಎಂದು ಕರೆಯುತ್ತಾರೆ. ಅಲ್ಲಿ ನಮ್ಮ ಪರಿಭಾಷೆಯ ವ್ಯಾಪ್ತಿ, ವಿಸ್ತಾರಗಳಿಲ್ಲ. ಅದು ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳನ್ನು ಕುರಿತು ಹೇಳುತ್ತದೆ. ಸತ್ತವರ ಪ್ರೇತಾತ್ಮಗಳನ್ನು ಕರೆದು, ಅವುಗಳೊಡನೆ ಮಾತನಾಡುವವನನ್ನು 'ಸ್ಪಿರಿಚುಯಲಿಸ್ಟ್' ಎಂದು ಕರೆಯುತ್ತಾರೆ.

■ ಶಿಕಾಕು

## ಮಾತೇ ಮುತ್ತು

★ ವ್ಯರ್ಥವೀ ಜೀವನದ ಬಡಿದಾಟವೆನ್ನದಿರು,
ಅರ್ಥವಹುದು ನಿನಗೆ ಪೂರ್ಣದರ್ಶನದಿಂ.

–ಡಿವಿಜಿ

★ ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡ ಹುಚ್ಚಪ್ಪಗಳಿರಾ.

–ಪುರಂದರ ದಾಸ

★ ಬರಿಯ ಕೈಯಲ್ಲಿ ಇಲ್ಲಿಗೆ ಬಂದೆ; ಬರಿಯ ಕೈಯಲ್ಲಿ ಇಲ್ಲಿಂದ ಹೋಗುತ್ತೇನೆ.

–ಬೈಬಲ್

★ ಬಾಳುವುದೆ ಬದುಕಲ್ಲ; ಬದುಕಿನರ್ಥವ ತಿಳಿವ ಚಿಂತನೆಯ ಬದುಕು ನಿಜ ಬದುಕು.

–ಕೆ.ಎಸ್.ನಿಸಾರ್ ಅಹಮದ್

★ ಜೀವನ ಕಷ್ಟವಿರಬಹುದು, ಸಾವು ಇನ್ನೂ ಕಷ್ಟ.

–ರಷ್ಯಾ ಗಾದೆ

★ ಒಂದು ಕಪ್ ಹಾಲಿನ್ಯಾಗ ಸ್ವರ್ಗ ಕಾಣಬಹುದು. ಒಂದು ತುತ್ತು ರೊಟ್ಯಾಗ ಆನಂದ ಕಾಣಬಹುದು. ಆದರ ಗೊತ್ತಿಲ್ಲ ಮನುಷ್ಯಾಗ. ಟೇಬಲ್ ಮ್ಯಾಗ ನೂರು ಸಾಮಾನದಾವ ತಿನ್ನೂವಂತಾವು. ಸಂತೋಷಿಲ್ಲ ಮನುಷ್ಯಾಗ.

–ಸಿದ್ದೇಶ್ವರ ಸ್ವಾಮಿಗಳು

★ ಹಿತಕರವಲ್ಲದ, ಆದರೆ ಅವಶ್ಯಕವಾದ ಜೀವನದ ಭಾಗ– 'ನೋವು.'

–ಹೆರಾಲ್ಡ್ ಎಸ್.ಕುಶ್ನರ್

★ ಮನುಷ್ಯ ಜೀವನದ ಪರಿಶೋಧನೆ ಮಾಡುವುದು, ಅದನ್ನು ಇನ್ನಷ್ಟು ಉತ್ತಮಪಡಿಸಲು.

–ಲಿಯೋ ಟಾಲ್‌ಸ್ಟಾಯ್

★ ಧರ್ಮ ಒಂದೇ ನಿಜವಾದ ಮಿತ್ರ. ಸಾವಿನಲ್ಲಿಯೂ ಸಹ ಜೊತೆಯಲ್ಲಿರುತ್ತದೆ. ಉಳಿದ ಎಲ್ಲವೂ ಶರೀರದೊಡನೆ ನಾಶವಾಗುತ್ತದೆ.

–ಮನು ಸ್ಮೃತಿ

★ ಜೀವನದ ಧ್ಯೇಯ ವಾಕ್ಯ: 'ಕೊಡು– ತೆಗೆದುಕೋ' ಪ್ರತಿಯೊಬ್ಬರೂ ಕೊಡಬೇಕು, ತೆಗೆದುಕೊಳ್ಳಬೇಕು. ಎರಡನ್ನೂ ಮಾಡದವ ಫಲ ಇಲ್ಲದ ಮರದಂತೆ.

–ಜೆ.ವಿ.ಹರ್ಷ್ ಜೆಡಾಚಾವ್

★ ನಾವು ಅಪೇಕ್ಷಿಸಿದಂತೆ ಜೀವಿಸುವುದಿಲ್ಲ; ಸಾಧ್ಯವಿರುವಂತೆ ಜೀವಿಸುತ್ತೇವೆ.

–ಮಿನಾಂಡರ್

★ ತನಗಿಂತ ಹೀನರ ಜೊತೆ ಸಹವಾಸ ಮಾಡಿದರೆ ಬುದ್ಧಿ ಕುಂದುತ್ತದೆ; ತನಗೆ ಸಮರಾದವರೊಡನೆ ಸೇರುವುದರಿಂದ ಸಮವಾಗಿರುತ್ತದೆ; ಆದರೆ ಅಧಿಕರೊಡನೆ ಸೇರುವುದರಿಂದ ಬುದ್ಧಿ ಹೆಚ್ಚುತ್ತದೆ.

–ಹಿತೋಪದೇಶ

★ ತಮ್ಮ ಕಷ್ಟಗಳ ಪರಿಹಾರಕ್ಕಾಗಿ ತಿಳಿದವರು ಒಳ್ಳೆಯ ಸ್ನೇಹಿತರನ್ನು ಮಾಡಿಕೊಳ್ಳಬೇಕು. ಯಾರಿಗೆ ಸ್ನೇಹಿತರೇ ಇಲ್ಲವೋ ಅಂಥವನು ಯಾವ ಕಷ್ಟದಿಂದಲೂ ಪಾರಾಗಲಾರ!

–ಪಂಚತಂತ್ರ

★ ಎರಡು ಸಮುದಾಯಗಳನ್ನು ಒಡೆದು ಆಳಬಲ್ಲೆ ಎಂಬುದು ಕೆಲ ಕಾಲ ನಡೆಯಬಹುದು. ಆದರೆ ಇಂತಹ ಅತೀ ಬುದ್ಧಿವಂತಿಕೆ ಹೆಚ್ಚುಕಾಲ ನಡೆಯುವುದಿಲ್ಲ.

–ಅನುಭವಾಮೃತ

★ ನತದೃಷ್ಟನಾದವನ ಎದುರು ನಿನ್ನ ಅದೃಷ್ಟದ ಬಗ್ಗೆ ಕೊಚ್ಚಿಕೊಳ್ಳಬೇಡ.

–ಪ್ಲೂಟಾರ್ಕ್

★ ಕಠಿಣ ಹೃದಯಿಯಾದವನು ದೇವರಿಂದ ಬಲು ದೂರದಲ್ಲಿ ಇರುತ್ತಾನೆ.

–ಬೆಂಜಮಿನ್ ಫ್ರಾಂಕ್ಲಿನ್